**ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು**

ಡಾ॥ ಬಾಬು ಜಗಜೀವನ್‌ರಾಂ ಭವನ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ, ಮೈಸೂರು-02

E-mail – dobcmmysore1@gmail.com Ph No:0821- 2342917

ಸಂ:ಹಿಂವಕಇ/ಬಿ3/ಸಿಆರ್-91/2015-16 ದಿನಾಂಕ:14-08-2017

## ಅಧಿಸೂಚನೆ

ಸರ್ಕಾರದ ಆದೇಶ ಸಂಖ್ಯೆ:ಹಿಂವಕ/336/ಬಿಇಟಿ/2015 ದಿನಾಂಕ:05.11.2015 ಹಾಗೂ 29.09.2016 ರನ್ವಯ ಮೈಸೂರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ 58 ಅಡುಗೆಯವರು ಹುದ್ದೆಗಳಿಗೆ, 92 ಅಡುಗೆ ಸಹಾಯಕರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ದಿನಾಂಕ:20.10.2016 ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಸದರಿ ಅಧಿಸೂಚನೆರನ್ವಯ ಹಾಗೂ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸಲಾಗುತ್ತಿದ್ದ ಆದೇಶರನ್ವಯ ಅಗತ್ಯ ಕ್ರಮಕೈಗೊಂಡು ದಿನಾಂಕ: 31-07-2017ರಂದು ತಾತ್ಕಾಲಿಕ ಪಟ್ಟಿಯನ್ನು ಹೊರಡಿಸಲಾಗಿರುತ್ತದೆ.

ಸದರಿ ತಾತ್ಕಾಲಿಕ ಪಟ್ಟಿಯ ಮೇಲೆ ಸ್ವೀಕೃತಿಯಾದ ಆಕ್ಷೇಪಣೆಗಳಿಗೆ ಉತ್ತರವನ್ನು ನೀಡಲಾಗಿರುವ ಹಿನ್ನೆಲೆಯಲ್ಲಿ ಅಂತಿಮ ಆಯ್ಕೆ ಪಟ್ಟಿ ಹಾಗೂ ಶೇಖಡ 10 ರಷ್ಟು ಅನುಪಾತದ ಕಾಯ್ದಿರಿಸುವ ಪಟ್ಟಿಯನ್ನು ಇದರೊಂದಿಗೆ ಪ್ರಕಟಿಸಲಾಗಿದೆ.

ಮುಂದುವರೆದಂತೆ, ಸರ್ಕಾರದ ಆದೇಶ ಸಂ:ಹಿಂವಕ 375 ಬಿಇಟಿ 2017 ಬೆಂಗಳೂರು, ದಿನಾಂಕ: 07-08-2017 ರಂತೆ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಎಲ್ಲಾ ಅಭ್ಯರ್ಥಿಗಳು ಈಗಾಗಲೇ ದಾಖಲೆಗಳ ಪರಿಶೀಲನಾ ವೇಳೆಯಲ್ಲಿ ಸಲ್ಲಿಸಲಾಗಿದ್ದ ದೃಢೀಕೃತ ನಕಲು ಪ್ರತಿಗಳ ಮೂಲ ದಾಖಲೆಗಳನ್ನು ದಿನಾಂಕ: 21-08-2017ರಂದು ಮಧ್ಯಾಹ್ನ 3.00 ಗಂಟೆಗೆ ಈ ಕೆಳಕಂಡ ವಿಳಾಸಕ್ಕೆ ಖುದ್ದು ಹಾಜರಾಗಿ ಸಲ್ಲಿಸಲು ಸೂಚಿಸಿದೆ (ಹಾಜರಾತಿ ಕಡ್ಡಾಯವಾಗಿರುತ್ತದೆ).

ವಿಳಾಸ:- **ಜಿಲ್ಲಾ ಅಧಿಕಾರಿಗಳ ಕಛೇರಿ**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**
**ಡಾ॥ ಬಾಬು ಜಗಜೀವನರಾಂ ಭವನ, ಆದಿಪಂಪ ರಸ್ತೆ,**
**ನಾರಾಯಣಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ,**
**ಮೈಸೂರು-02**

ನೇಮಕಾತಿ ಪ್ರಾಧಿಕಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ.

ಸದಸ್ಯ ಕಾರ್ಯದರ್ಶಿ
ಜಿಲ್ಲಾ ಮಟ್ಟದ ಗ್ರೂಪ್-ಡಿ ನೇಮಕಾತಿ
ಪ್ರಾಧಿಕಾರ ಹಾಗೂ ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಮೈಸೂರು ಜಿಲ್ಲೆ, ಮೈಸೂರು.